9-30 A.M.

Horticultural Schemes in Malnad Area

386. SRI G. PUTTASWAMY (Mudigere).— Will the Minister for Fisheries and Horticulture be pleased to state.—

(*a*) the number and names of places where different Horticultural Schemes being implemented in Malnad area *i.e.* South Kanara, Hassan, Coorg, Chickmagalore and North Kanara District.

(*b*) the amount spent on each of them, year-wise figures during the last three years *i. e.*, 1971-72, 73-74 74-75 may be furnished ?

SRI K. T. RATHOD (Minister for Fisheries and Horticulture).—

(*a*) *Vide* the annexed Statement I placed on the table of the House. **

(*b*) *Vide* the annexed Statement II placed on the table of the House. **

ಶ್ರೀ ಜಿ. ಪುಟ್ಟಸ್ವಾಮಿ.— ಸ್ವಾಮಿ, ವೆಸ್ಟ್ರನ್ ಘಾಟ್ ಸ್ಕೀಂಗ್ ತಾವು ೩೫ ಸಾವಿರ ರೂಪಾಯಿಗಳನ್ನು ಖರ್ಚುಮಾಡಿರುವುದಾಗಿ ಹೇಳುತ್ತಿದ್ದೀರಿ ಯಾವ ಜಿಯಾವುದಕ್ಕೆ ಎಷ್ಟೆಷ್ಟು ಖರ್ಚುಮಾಡಿದ್ದೀರಿ ಎನ್ನುವ ಬಗ್ಗೆ ವಿವರಗಳನ್ನು ಹೇಳುತ್ತೀರಾ ಸ್ವಾಮಿ ?

† ಶ್ರೀ ಕೆ. ಟಿ. ರಾಥೋಡ್ — ತಾವು ಕೇಳಿರುವ ಪ್ರಶ್ನೆಗೆ ಉತ್ತರ ಕೊಡುವಾಗ ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟ ವಿಷಯವೂ ಸೇರಿರುತ್ತದೆ. ಅದಕ್ಕೋಸ್ಕರ ತಾವು ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿದರೆ ನಾನು ಉತ್ತರ ಕೊಡುತ್ತೇನೆ. ಏಕೆಂದರೆ ಈಗ ತಾವು ಕೇಳುತ್ತಿರುವ ಪ್ರಶ್ನೆಗೆ ಇಲ್ಲಿ ವಿವರಗಳು ನನಗೆ ಸಿಕ್ಕುತ್ತಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.— ಆರೆಂಜ್ ಪ್ಲಾಂಟೇಷನ್‌ಗೆ ಹಣವನ್ನು ಖರ್ಚು ಮಾಡುತ್ತಿರುವುದಾಗಿ ಹೇಳುತ್ತೀರಿ, ಇದಕ್ಕೆ ತಾವು ಯಾವ ಯಾವ ರಿಯಾಯಿತಿ ಕೊಟ್ಟಿದ್ದೀರಿ ಎಂಬುದನ್ನು ತಾವು ಹೇಳುತ್ತೀರಾ ?

ಶ್ರೀ ಕೆ. ಟಿ. ರಾಥೋಡ್.— ಈ ಸ್ಕೀಂ ಕೆಳಗೆ ಆರೆಂಜ್ ಪ್ಲಾಂಟೇಷನ್‌ಗೆ ಯಾವ ಯಾವ ರಿಯಾಯಿತಿಯನ್ನು ಕೊಡಬೇಕೋ ಅವನ್ನೆಲ್ಲಾ ಕೊಟ್ಟಿದೆ. ಅದರ ಪೂರ್ಣ ವಿವರ ಈಗ ನನಗೆ ಸಿಕ್ಕುತ್ತಿಲ್ಲ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.— ಸ್ವಾಮಿ, ನನಗೆ ಗೊತ್ತಿರುವಂತೆ ಇದು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ಸ್‌ನಲ್ಲಿ ಮಾತ್ರ ಸೀಮಿತವಾಗಿದೆ, ಈ ಸ್ಕೀಂನ್ನು ತಾಲ್ಲೂಕುಗಳಿಗೂ ಎಕ್ಸ್‌ಟೆಂಡ್ ಮಾಡುತ್ತೀರಾ ?

ಶ್ರೀ ಕೆ. ಟಿ. ರಾಥೋಡ್.— ಇದು ಮಾನ್ಯ ಸದಸ್ಯರಾದ ಶ್ರೀಮಾನ್ ನಾಯ್ಡುರವರಿಗೆ ಗೊತ್ತಿಲ್ಲ ಎಂದು ಕಾಣುತ್ತದೆ. ಅವರು ಹೇಳಿದಂತೆ ಈ ಸ್ಕೀಂ ಬರೀ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್‌ಗೆ ಮಾತ್ರ ಸೀಮಿತ ಎಂದು ಅಲ್ಲ, ಈ ಸ್ಕೀಂನ್ನು ಎಲ್ಲಾ ತಾಲ್ಲೂಕುಗಳಲ್ಲೂ ಕವರ್ ಮಾಡಬೇಕೆಂದು ಒಂದು ಗುರಿಯನ್ನು ಇಟ್ಟುಕೊಂಡಿದ್ದೇವೆ. ಆ ಪೈಕಿ ಕೆಲವು ತಾಲ್ಲೂಕುಗಳಲ್ಲಿ ಈ ಕೆಲಸ ಮಾಡಿಲ್ಲದೇ ಇರಬಹುದು ಅಂಥ ತಾಲೂಕುಗಳಲ್ಲೂ ಮಾಡಬೇಕೆಂದು ವ್ಯವಸ್ಥೆ ಮಾಡುತ್ತೇವೆ,

---

** Copies placed in the Karnataka Legislature Library Vide No. 24 dated 18-6-77

SMT. WINNIFRED F. FERNANDES.— May I know what is the amount allotted and spent for the South Kanara District and coondapur in particular because it comes under the Western Ghats Development Scheme for the last three years under different Horticultaral Schemes.

ಶ್ರೀ ಕೆ. ಟಿ. ರಾಥೋಡ್.— ಮಾನ್ಯ ಸದಸ್ಯರು ಕೇಳಿರುವುದಕ್ಕೆ ಸರಿಯಾದ ಉತ್ತರವನ್ನು ನಾನು ಕೊಟ್ಟಿದ್ದೇನೆ. ಅವರು ಕೇಳಿರುವುದು ಯಾವ ಯಾವ ಸ್ಕೀಂ ಕೆಳಗೆ ಯಾವ ಯಾವ ಸ್ಥಳದಲ್ಲಿ ಎಷ್ಟೆಷು ಹಣವನ್ನು ಖರ್ಚು ಮಾಡಿದ್ದೀರಿ ಎಂದು. ಅದಕ್ಕೆ ಸರಿಯಾದ ಉತ್ತರವನ್ನೇ ನಾನು ಕೊಟ್ಟಿದ್ದೇನೆ,

ಶ್ರೀಮತಿ ವಿನಿಫ್ರೆಡ್ ಎಫ್. ಫರ್ನಾಂಡಿಸ್.— ಈಗ ತಾವು ಸೌತ್ ಕೆನರಾ ಡಿಸ್ಟ್ರಿಕ್ಟ್‌ಗೆ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎಂದು ನಮಗೆ ವಿವರ ಹೇಗೆ ಸಿಕ್ಕಬೇಕು. ? It is not mentioned in the answers placed on the table of the house.

ಶ್ರೀ ಕೆ. ಟಿ. ರಾಥೋಡ್.— ತಮಗೆ ಅದನ್ನೆಲ್ಲಾ ಓದಿ ಹೇಳಬೇಕಾದರೆ ಸುಮಾರು ½ಗಂಟೆಯಾಗುತ್ತದೆ. ಇಲ್ಲಿ ೨೬ ಸ್ಕೀಂಗಳಿವೆ. ಕಳೆದ ೩ ವರ್ಷಗಳಲ್ಲಿ ಪ್ರತಿವರ್ಷವೂ ಯಾವ ಯಾವ ಸ್ಕೀಂ ಕೆಳಗೆ ಎಷ್ಟೆಷ್ಟು ಹಣವನ್ನು ಖರ್ಚುಮಾಡಿದ್ದೇವೆ ಎಂಬುದು ಇಲ್ಲಿದೆ.

ಅಧ್ಯಕ್ಷರು.— ಇಲ್ಲಿ ಸಚಿವರುಪ್ರತಿಯೊಂದು ವಿವರಗಳನ್ನೂ ಸಭೆಗೆ ಓದಿ ಹೇಳುತ್ತಾ ಹೋದರೆ ಬಹಳ ಹೊತ್ತಾಗುತ್ತದೆ. ಅದೂವರೆಗೂ ಎಲ್ಲರೂ ಸುಮ್ಮನೆ ಕುಳಿತಿರಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.— ಎಲ್ಲಾ ಓದಿ ಹೇಳುವುದಕ್ಕೆ ಸಾಧ್ಯವಾಗದಿದ್ದರೆ ಸೌತ್ ಕೆನರಾಕ್ಕೆ ಎಷ್ಟು ಖರ್ಚುಮಾಡಿದ್ದಾರೆ ಎನ್ನುವ ಬಗ್ಗೆ ಮಾತ್ರ ವಿವರ ಹೇಳಲಿ.

ಶ್ರೀ ಕೋಣಂದೂರು ಲಿಂಗಪ್ಪ.— ದಕ್ಷಿಣ ಕನ್ನಡ ಜಿಲ್ಲೆ, ಮತ್ತು ಕುಂದಾಪುರದ ಬಗ್ಗೆ ವಿವರವನ್ನು ಹೇಳಲಿ.

ಶ್ರೀ ಕೆ. ಟಿ. ರಾಥೋಡ್.— ಇಲ್ಲಿ ಕುಂದಾಪುರಕ್ಕೇ ಬೇರೆ, ಅದಕ್ಕೆ ಬೇರೆ. ಇದಕ್ಕೆ ಬೇರೆ ಎಂದು ಯಾವುದೂ ಇಲ್ಲ.

SMT WINNIFRED F. FERNANDES.— When the Hon. Minister says that he has not spent anything for Coondapur Taluk, though there is World Bank assistance for improvement of Horiculture, may I know the reason for this ?

ಶ್ರಿ ಕೆ ಟಿ ರಾಥೋಡ್.— ಟೆಕ್ನಿಕಲ್ ಗೈಡ್‌ನ್ಸ್ ಮೇಲೆ ಯಾವ ಯಾವ ಕೆಲಸಗಳನ್ನು ಎಲ್ಲೆಲ್ಲಿ ತೆಗೆದುಕೊಳ್ಳಬೇಕೋ ಆಯಾಯ ಸ್ಥಳಗಳಲ್ಲಿ ಅಂಥ ಕೆಲಸಗಳನ್ನು ತೆಗೆದುಕೊಂಡಿದ್ದೇವೆ ತಾವು ಕೇಳಿರುವ ಪ್ರಶ್ನೆ ಇದರಲ್ಲಿ ಸೇರಿದೆ. ಇನ್ನು ಮುಂದೆ ಯಾವ ಯಾವ ಸ್ಥಳಗಳಿಗೆ ಏನೇನು ಕೆಲಸಗಳನ್ನು ಮಾಡಿಸಬೇಕೋ ಅವುಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಮಾಡಿಸುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.— ಪಶ್ಚಿಮ ಘಟ್ಟಗಳ ಜನರ ಒತ್ತಾಯದ ಮೇಲೆ ನಾವು ಮಲೆನಾಡಿನ ಪ್ರತಿಯೊಂದು ತಾಲ್ಲೂಕು ಗಳಿಗೂ ಹೋಗಿ ಎಲ್ಲೆಲ್ಲಿ ಏನೇನು ಕೆಲಸಗಳನ್ನು ಮಾಡಬೇಕೆಂಬುದನ್ನು ನೋಡಿ ಕೊಂಡು ಬಂದು ಹೇಳಿದ್ದೇವೆ. ಇಲ್ಲಿ ತಾವು ಹಣವನ್ನು ಖರ್ಚು ಮಾಡಿರುವುದು ಮಲೆನಾಡಿನ ಭಾಗದ ಕೆಲಸಗಳಿಗೆ ಮಾಡಿರುವುದೇ ಅಥವಾ ಬೇರೆ ಕಡೆ ಖರ್ಚು ಮಾಡಿರುವುದೇ ಎಂಬುದು ನನಗೆ ಅರ್ಥ ವಾಗುತ್ತಿಲ್ಲ.

ಶ್ರೀ ಕೆ. ಟಿ. ರಾಥೋಡ್ — ಮಾನ್ಯ ಸದಸ್ಯರು ಹಿಂದೆ ಈ ಪ್ರಶ್ನೆ ಕೇಳಿದ್ದಾಗ ಅದಕ್ಕೆ ಸಮಾಧಾನವಾದ ಉತ್ತರವನ್ನು ಹೇಳಿದ್ದೇನೆ. ಇನ್ನು ಮುಂದೆ ಯಾವ ಯಾವ ಭಾಗದಲ್ಲಿ ಏನೇನು ಕೆಲಸಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಲು ವ್ಯವಸ್ಥೆ ಮಾಡುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ —ಕೊಂದಾಪುರ ಹಾಗೆಯೇ ಇದಕ್ಕೆ ತೀರ್ಥಹಳ್ಳಿ ಕೂಡ ಸೇರುತ್ತದೆ. ಹಿಂದೆ ಒಂದು ಸಾರಿ ಮಾನ್ಯ ಮಂತ್ರಿಗಳು ಅಲ್ಲಿಗೆ ಬಂದಿದ್ದಾಗ ನಾವು ಈ ವಿಷಯವನ್ನು ಹೇಳಿದ್ದೆವು. ಆಗ ಸಚಿವರು ಈ ಕೆಲಸವನ್ನು ಕೈಗೊಳ್ಳುತ್ತೇವೆ ಎಂದು ಹೇಳಿದ್ದರು. ಆದರೆ ಇದುವರೆಗೂ ಕೂಡ ಅಲ್ಲಿ ಏನೂ ಕೆಲಸವನ್ನೂ ಕೈಗೊಂಡಿಲ್ಲ. ಈ ವೆಸ್ಟರ್ನ್ ಘಾಟ್ಸ್ ಕೆಲಸಗಳನ್ನು ತಾವು ಎಲ್ಲೆಲ್ಲಿ ಮಾಡಿದಿರಿ, ತಾವು ಖರ್ಚುಮಾಡಿರುವ ಹಣ ಸದುಪಯೋಗವಾಗಿದೆಯೇ ಎನ್ನುವ ಬಗ್ಗೆ ಉತ್ತರ ಕೊಡುತ್ತೀರಾ?

ಶ್ರೀ ಕೆ.ಟಿ. ರಾಥೋಡ್.—ಈಗ್ಗೆ ಕಳೆದ ೩ ವರ್ಷಗಳಿಂದ ಎಲ್ಲೆಲ್ಲಿಗೆ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದೇವೆ ಎನ್ನುವ ಬಗ್ಗೆ ಉತ್ತರವನ್ನು ಕೊಟ್ಟಿದ್ದೇನೆ. ಪ್ರತಿಯೊಬ್ಬರ ಸ್ಥಳಗಳಲ್ಲೂ ಈ ಕೆಲಸವನ್ನು ಮಾಡಬೇಕೆಂದು ಹೇಳುವುದಾದರೆ ಅದನ್ನು ಇಲಾಖೆಯವರು ಪರಿಶೀಲನೆ ಮಾಡಿ ಎಲ್ಲೆಲ್ಲಿ ಮಾಡುವುದಕ್ಕೆ ಸಾಧ್ಯವೋ ಅಂಥ ಕಡೆ ಮಾಡುತ್ತಾರೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ತಾವು ಒದಗಿಸಿರುವ ಪಟ್ಟಿಯನ್ನು ನೋಡಿದರೆ "ಸ್ಕೀಂ ಫಾರ್ ಪೈನಾಪಲ್ ಡೆವಲಪ್‌ಮೆಂಟ್" ಎಂದು ಕಾರ್ಕಳದಲ್ಲಿ ಮಾತ್ರ ಇದೆ. ಈ ಸ್ಕೀಂನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲೆಲ್ಲಿ ಮಾಡುವುದಕ್ಕೆ ಸಾಧ್ಯವಿದೆಯೋ ಅಲ್ಲೆಲ್ಲಾ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ಸ್ವಾಮಿ?

ಶ್ರೀ ಕೆ. ಟಿ. ರಾಥೋಡ್.—ನಮ್ಮ ಹಣದ ಸಾಧ್ಯತೆಯನ್ನು ನೋಡಿಕೊಂಡು ಮಾನ್ಯ ಸದಸ್ಯರು ಕೇಳುವ ರೀತಿಯಲ್ಲಿ ವೆಸ್ಟರ್ನ್ ಘಾಟ್ ಸೆಕ್ಷನ್‌ನಲ್ಲಿ ಎಲ್ಲೆಲ್ಲಿ ಮಾಡುವುದಕ್ಕೆ ಸಾಧ್ಯವಿದೆಯೋ ಅಲ್ಲೆಲ್ಲಾ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ವಿ. ಕಕ್ಕಿಲಾಯ.—ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಎಂ. ಎಸ್. ಕೃಷ್ಣನ್‌ರವರ ಈ ಪ್ರಶ್ನೆ ನಂ. ೩೯೮ ಬಹಳ ಮುಖ್ಯವಾದುದು. ಮಾನ್ಯ ಕೃಷ್ಣನ್‌ರವರ ಪರವಾಗಿ ಈ ಪ್ರಶ್ನೆಯನ್ನು ನಾನು ಕೇಳುತ್ತೇನೆ. ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು.—ಆಗಬಹುದು. ತಾವು ಮಾನ್ಯ ಕೃಷ್ಣನ್‌ರವರ ಪ್ರಶ್ನೆ ಕೇಳಬಹುದು.

Survey on Rural Indebtedness

398. SRI M. S. KRISHNAN (Malleswaram).—Will the Minister for Co-operation be pleased to state.—

(*a*) whether any survey has been conducted in respect of rural indebtedness;

(*b*) if so, the amount of rural indebtedness as on 1st January 1977 or any other date when the survey is conducted;

(*c*) what has been the lending by institutional organisations, (nationalised and Commercial Banks, Co-operative Societies, etc.)

(*d*) the steps the Government has taken in order to fill the gap between lending by institutional organisations and non-institutional borrowings so that relief is given to the rural poor?

SRI K. H. RANGANATH (Minister for Co-operation).—

(*a*) Yes; by Reserve Bank of India.

(*b*) Rs. 310.2 crores as on June 1971.

(*c*) Advances for agricultural purposes are as under.—

(i) By Commercial Banks Rs. 137.95 crores as on 24th September 1976.